ನಂದೀದುರ್ಗದ ಡಿವಿಜ್ಞ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ಞ 1896—97ನೇ ಇಸವಿ ಮಿ|| ಅರ್ಜೀ ನಂಬರ್ 141.

ಮೃತಪಟ್ಟ ನರಸಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿಡ್ಲಘಟ್ಟದ ತಾಲ್ಲೂಕು ಸೂದಲಿ ಹೋಬಳಿ ವೆಂಕಟಾಪುರದಲ್ಲಿರುವ ಚಿಕ್ಕರಾಮಂಣನು, ಮೃತಪಟ್ಟ ಸದರೀ ನರಸಂಣನವರಿಗೆ ಆಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ವೆಂಕಟಾಪುರದ ಸ್ಥಳದ ಚಿಕ್ಕರಾಮಂಣನವರು, ವೆಂಕಟಾಪುರದ ವಾಸ ಸ್ಥರಾಗಿ ಮೃತಪಟ್ಟ ನರಸಂಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಞ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯಾಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕರಾಮಂಣನವರ ಅರ್ಜಿಯನ್ನು ಸ್ಞ 1896ನೇ ಇಸವಿ ನವಂಬರ್ ತಿಂಗಳ ತಾರೀಖು 26 ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಞ 1896ನೇ ಇಸವಿ ಅಕ್ಟೋಬರು ತಿಂಗಳ 29ನೇ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಂದ ನಮ್ಮದಸ್ತಖತ್ತಿನೊಡನೆ ಕೊಡೋಣಾಗಿಧೆ.

ಸಿ. ಕ್ರಸ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಅಕ್ಟೋಬರ 1896.

ಬೆಂಗಳೂರು ಡಿಸ್ಟ್ರಿಕ್ಟ್ 1ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೈಸೂರ್ ಎಫ್. ನರಸಿಂಹಯ್ಯಂಗಾರ್ಯವರು ಸೆಪ್ಟಂಬರ್ 17ನೇ ತಾರೀಖಿನಲ್ಲಿ ತಮ್ಮ ಮನೆಯ ಆಫಿಸ್ ರೂಮ್ ಮೇಜಿನ ಮೇಲೆ ಇಟ್ಟಿದ್ದ ಈ ಕೆಳಗಿನ ಪ್ರಾಪ್ಯೀಲಿನಲ್ಲಿ ಕಂಡ ಫಿಡಿಯಾರ ಮತ್ತು ಸರಪಣಿ ಸಹ ಕಳವಾಗಿರುವದಾಗಿಯೂ ಇದನ್ನ ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿಗಳು ಇನಾಂ ಕೊಡುವದಾಗಿ ಬರಸಿರುತ್ತಾರೆ.

(ವಾಚ್ ಮತ್ತು ಸರಪಣಿಯ ತಪ್ಸೀಲ್.)

ಪಿ. ಆರ್. ಅಂಡ್ ಸನ್ಸ್, ರೈಲ್ವೆ ರೆಗ್ಯುಲೇಟರ್ ಎಂದು ಇಂಗ್ಲೀಷ್ ಅಕ್ಷರದಲ್ಲಿ ವಾಚ್ ಮೇಲೆ ಗುರ್ತು. ಇಧೆ ಇದರ ಕ್ರಯು 25 ರೂಪಾಯಿ.

ಇದಕ್ಕೆ ಹಾಕಿ ಇರುವ ಭಂಗಾರದ ಸರಪಣಿಯು ಮೂರುಚಿಕ್ಕ ಸರಪಣಿಗಳು ಸಂಗಡ ಜಾಯಿಂಟ್ ಆಗಿಯು ವಂಡುಕಡೆ ಹಿತ್ತಾಳಿ ವುಂಗ್ರವು ಮತ್ತೊಂದುಕಡೆ ಭಂಗಾರದ ವುಂಗ್ರವು ಹಾಕಿದ್ದಾಗಿಯೂ ಇಧೆ. ಇದು 9 ಇಂಚ್ ಉದ್ದ ಅಗಲ ¾ ಇಂಚ್ ಉಳ್ಳದ್ದಾಗಿಯೂ ಇಧೆ. ಇದರ ಕ್ರಯು 40 ರೂಪಾಯಿಗಳು.

ಡನಿಂಗ್,
ಸೂಪರ್ಟೆಂಡೆಂಟ್ ಆಫ್ ಪೋಲೀಸ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನೂ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟ್.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಣ	1ನೇ ಡಿಸೆಂಬರ್ ,,
ಬೆಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್ ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜವಾಯಿಷಿ ಬ್ಯಾಗೆ ಮೈಸೂರು ಡಿಸ್ಟ್ರಿಕ್ಟ್ ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದೆಲನ್ನ ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಬಿಕರಿ ಬ್ಯಾಗೆ ವದಗಿಸಲ್ಪಡುವ ಸಂದಲಿನ ತರಹೆಗಳ ವೊತ್ತವನ್ನ ಇದರಡಿ ವಿವರಿಸಿಧೆ.